**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 210 ಎಂಎನ್‌ವೈ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 24-02-2020.

**ತಿದ್ದುಪಡಿ ಆದೇಶ**

ಸರ್ಕಾರದ ಆದೇಶ ಸಂಖ್ಯೆ: ನಅಇ 210 ಎಂಎನ್‌ವೈ 2017, ದಿನಾಂಕ: 10-12-2018 ರ ಆದೇಶವನ್ನು ಈ ಕೆಳಗಿನಂತೆ ಪರಿಷ್ಕರಿಸಿದೆ.

ಆದೇಶದಲ್ಲಿ ಕ್ರಮ ಸಂಖ್ಯೆ: 6ಕ್ಕೆ **"GAIL Gas Ltd/ GAIL India Ltd ಸಂಸ್ಥೆಯು ಓಪನ್ ಟ್ರೆಂಚ್ ವಿಧಾನದ ಮೂಲಕ ಗ್ಯಾಸ್ ಪೈಪ್‌ಲೈನ್ ಅಳವಡಿಸಿದ್ದಲ್ಲಿ, ಪ್ರತಿ ಮೀಟರಿಗೆ ರೂ.1,857/-ಗಳ ಅನುಮತಿ ಶುಲ್ಕವನ್ನು ಮತ್ತು ಹೆಚ್.ಡಿ.ಡಿ. (Horizontal Directional Drilling) ವಿಧಾನದ ಮೂಲಕ ಗ್ಯಾಸ್ ಪೈಪ್‌ಲೈನ್ ಅಳವಡಿಸಿದ್ದಲ್ಲಿ, ಪ್ರತಿ ಮೀಟರಿಗೆ ರೂ.700 ಅನುಮತಿ ಶುಲ್ಕವನ್ನು ಪಾವತಿಸತಕ್ಕದ್ದು. ಮತ್ತು ಆದೇಶ ಸಂಖ್ಯೆ ನಅಇ 210 ಎಂಎನ್‌ವೈ 2017 ದಿನಾಂಕ 10-12-2018ರಂತೆ ಮೇಲ್ವಿಚಾರಣೆ ಶುಲ್ಕವನ್ನು ಸಹ ಪಾವತಿಸತಕ್ಕದ್ದು"** ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಅಲ್ಲದೇ ಈ ಕೆಳಗಿನ ಅಂಶಗಳನ್ನು ಹೆಚ್ಚುವರಿಯಾಗಿ ಆದೇಶ ಸಂಖ್ಯೆ: ನಅಇ 210 ಎಂಎನ್‌ವೈ 2017, ದಿನಾಂಕ: 10-12-2018ಕ್ಕೆ ಸೇರಿಸಿ ಓದಿಕೊಳ್ಳತಕ್ಕದ್ದು.

**17. ಬಿಬಿಎಂಪಿಯು GAIL Gas Ltd/ GAIL India Ltd ಸಂಸ್ಥೆಗಳಿಗೆ ಗ್ರಾಹಕರ ಸಂಪರ್ಕ ನೀಡುವ ಕುರಿತಾದ Last Mile Connectivity ಗೆ ಅನುಮತಿಯನ್ನು ಬಿಬಿಎಂಪಿಯ ಆದೇಶ ಸಂಖ್ಯೆ ಆಯುಕ್ತರು/ಪಿಎಸ್‌ಆರ್(ಜಿ)/3031/18-19 ದಿನಾಂಕ:19-03-2019ರಲ್ಲಿ ನಿಗದಿಪಡಿಸಿರುವಂತೆ ನೀಡುವುದು.**

**18. ಬಿಬಿಎಂಪಿಯು ಹೊಸದಾಗಿ ಆಸ್ಫಾಲ್ಟಿಂಗ್ ಮಾಡಲಾಗಿರುವ ರಸ್ತೆಗಳನ್ನು ಮೂರು ವರ್ಷಗಳ ಕಾಲ ಕತ್ತರಿಸುವುದನ್ನು ನಿಷೇಧಿಸಿದ್ದು ಸದರಿ ನಿಷೇಧವನ್ನು GAIL Gas Ltd/ GAIL India Ltd ಸಂಸ್ಥೆಗಳ ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಸಂಬಂಧಿಸಿದಂತೆ 1 ವರ್ಷಕ್ಕೆ ಸೀಮಿತಗೊಳಿಸಲಾಗಿದೆ.**

ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮಿ ಸಾಗರ್ .ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

24/02

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.

...2/-

6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್., ಬೆಂಗಳೂರು.
9. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
10. ಅಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್., ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು.
13. ಜನರಲ್ ಮ್ಯಾನೇಜರ್, ಬಿ.ಎಸ್.ಎನ್.ಎಲ್., ಬೆಂಗಳೂರು ವೃತ್ತ, ಬೆಂಗಳೂರು.
14. ಮುಖ್ಯ ಅಭಿಯಂತರರು, ಎಬಿ.ಎಸ್.ಎನ್.ಎಲ್., ಬೆಂಗಳೂರು.
15. ಎಲ್ಲಾ ಜಂಟಿ ಆಯುಕ್ತರು/ಉಪ ಆಯುಕ್ತರು/ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು-ಆಯುಕ್ತರು, ಬಿಬಿಎಂಪಿ ಮುಖಾಂತರ.
16. ಮುಖ್ಯ ಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
17. Executive Director, Gail India Ltd, Swan 2nd Floor, No.323, Kodigehalli main road, Sahakar nagar, Bangalore-560092.
18. Chief General Manager, Gail Gas Ltd, No.S-44, 3rd Floor, M.S. Complex, New BEL Road, Bangalore-560054.
19. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
20. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.